ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ರವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

*****

**ಸೂಚನೆ:**

"ರಾಜ್ಯದ ರಾಜಧಾನಿ ಸರ್ಕಾರದ ಎಲ್ಲಾ ಇಲಾಖೆಗಳ ಪ್ರಧಾನ ಕಛೇರಿಗಳಿರುವ ಬೆಂಗಳೂರು ನಗರದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ IAS/IPS/IFS/ ಮತ್ತು ರಾಜ್ಯ ಸೇವೆಯ ಹಿರಿಯ ಅಧಿಕಾರಿಗಳಿಗೆ ಸೂಕ್ತ ವಸತಿ ಸೌಕರ್ಯಗಳ ಕೊರತೆಯಿದ್ದು, ಇಲಾಖಾಧಿಕಾರಿಗಳಿಗೆ ವಸತಿ ಗೃಹವನ್ನು ಹೊಂದಿರುವ (PWD/BDA/BBMP/KHB/ ಪೊಲೀಸ್ ಹೌಸಿಂಗ್ ಬೋರ್ಡ್ / ಸರ್ಕಾರದ ವಿವಿಧ ಮಂಡಳಿಗಳು ಮತ್ತು ನಿಗಮಗಳ ಒಡೆತನದ ಮನೆಗಳು) ಇವುಗಳಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸುವ ಕುರಿತು ಹಾಗೂ ಬೆಂಗಳೂರು ನಗರದಲ್ಲಿ ಕೆಲವು ಅಧಿಕಾರಿಗಳು ಸ್ವಂತ ಮನೆಗಳನ್ನು ಹೊಂದಿದ್ದು, ಅವುಗಳನ್ನು ಬಾಡಿಗೆಗೆ ನೀಡಿ, ಸರ್ಕಾರ ನೀಡುವ ಬಾಡಿಗೆ ಮನೆಯಲ್ಲಿರುವವರ ಕುರಿತು ಸರ್ಕಾರ ಕೈಗೊಂಡಿರುವ ನಿರ್ಧಾರದ ಬಗ್ಗೆ ನಿಯಮ 72ರಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ."

**ಉತ್ತರ:**

ಸರ್ಕಾರದ ಎಲ್ಲಾ ಇಲಾಖೆಗಳ ಪ್ರಧಾನ ಕಛೇರಿಗಳಿರುವ ರಾಜಧಾನಿ ಬೆಂಗಳೂರು ನಗರದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ **IAS/IPS/IFS** ಹಾಗೂ ರಾಜ್ಯ ಸೇವೆಯ ಹಿರಿಯ ಅಧಿಕಾರಿಗಳಿಗೆ (ಗ್ರೂಪ್-ಎ) ಲೋಕೋಪಯೋಗಿ ಇಲಾಖೆಯಿಂದ ಹಂಚಿಕೆ ಮಾಡಿರುವ ಹಾಗೂ ಖಾಲಿ ಇರುವ ವಸತಿ ಗೃಹಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ. ಸಂ | ಬ್ಲಾಕ್‌ಗಳ ಹೆಸರು | ಒಟ್ಟು ವಸತಿ ಗೃಹಗಳ ಸಂಖ್ಯೆ | ಹಂಚಿಕೆಯಾಗಿರುವ ವಸತಿ ಗೃಹಗಳು | ಖಾಲಿ ಇರುವ ವಸತಿ ಗೃಹಗಳು |
|---|---|---|---|---|
| 1 | ನಂದಿನಿ ಬಡಾವಣೆಯಲ್ಲಿರುವ ಎಂ.ಐ.ಜಿ ವಸತಿ ಸಮುಚ್ಚಯ | 52 | 32 | 20 |
| 2 | ಆರ್.ಎಂ.ವಿ. 2ನೇ ಹಂತದಲ್ಲಿರುವ ಡಾಲರ್ಸ್ ಕಾಲೋನಿ | 22 | 22 | – |
| 3 | ವಸಂತ ನಗರ | 39 | 38 | 1 |
| 4 | ಜಯಮಹಲ್ | 31 | 24 | 7 |
| 5 | ಕೃಷ್ಣಬ್ಲಾಕ್ ಕೋರಮಂಗಲ | 121 | 74 | 47 |
| 6 | ಶರಾವತಿ ಬ್ಲಾಕ್ ಕೋರಮಂಗಲ | 111 | 73 | 38 |
| 7 | ಕಾವಲ್ ಭೈರಸಂದ್ರ | 85 | 40 | 45 |
| 8 | ಜೀವನ್ ಭೀಮಾನಗರದ ಬಿ ಮಾದರಿಯ ವಸತಿ ಗೃಹಗಳು (ಗ್ರೂಪ್ ಎ ಅಧಿಕಾರಿಗಳು) | 54 | 41 | 13 |
| 9 | ಜೀವನ್ ಭೀಮಾನಗರದ ಸಿ ಮಾದರಿಯ ವಸತಿ ಗೃಹಗಳು (ಗ್ರೂಪ್ ಎ ಅಧಿಕಾರಿಗಳು) | 115 | 36 | 79 |
| | **ಒಟ್ಟು** | **630** | **380** | **250** |

ಬೆಂಗಳೂರಿನ ಜೀವನ್ ಭೀಮಾನಗರದಲ್ಲಿ ಸರ್ಕಾರಿ ವಸತಿಗೃಹಗಳ ಸಂಖ್ಯೆ:ಡಿ–134 ರಿಂದ ಡಿ–190 ರವರೆಗೆ ಕೆಡವಿ ನೂತನವಾಗಿ ಗ್ರೂಪ್–ಎ ಅಧಿಕಾರಿಗಳಿಗೆ 36 ಸರ್ಕಾರಿ ವಸತಿ ಗೃಹ ಸಮುಚ್ಚಯ ನಿರ್ಮಾಣ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ಲೋಇ 409 ಬಿಎಂಎಸ್ 2014, ದಿನಾಂಕ:14.11.2017 ರಲ್ಲಿ ಲೆಕ್ಕ ಶೀರ್ಷಿಕೆ 4216–01–700–2–01–386 ನಿವಾಸಿ ಕಟ್ಟಡಗಳು ಅಡಿ ರೂ.2750.00 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಬೆಂಗಳೂರಿನ ವಸಂತನಗರದಲ್ಲಿ 3ನೇ ಹಾಗೂ 5ನೇ ಕ್ರಾಸ್‌ನಲ್ಲಿ ಹಾಲಿ ಇರುವ C-52, C-53, C-54, C-55, C-56, C-57, C-58, C-59 & C-89, C-88, C-87, C-86, C-85, C-84, C-83, C-82 ವಸತಿ ಗೃಹಗಳ ಜಾಗದಲ್ಲಿ ಉದ್ದೇಶಿತ ಬಹುಮಹಡಿ ವಸತಿಗೃಹ (2ನೇ ಹಂತ) ಕಟ್ಟಡವನ್ನು ಗ್ರೂಪ್–ಎ ಅಧಿಕಾರಿಗಳಿಗೆ 72 ಸರ್ಕಾರಿ ವಸತಿ ಗೃಹ ನಿರ್ಮಾಣ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ಲೋಇ 249 ಬಿಎಂಎಸ್ 2020, ದಿನಾಂಕ:10.03.2021 ರಲ್ಲಿ ಲೆಕ್ಕ ಶೀರ್ಷಿಕೆ 4216–01–700–2–01–386 ನಿವಾಸಿ ಕಟ್ಟಡಗಳು ಅಡಿ ರೂ.11700.00 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 223 ವಸತಿ ಗೃಹಗಳು ಇರುತ್ತವೆ. ಸದರಿ ವಸತಿ ಗೃಹಗಳ ಪೈಕಿ ಕೋರಮಂಗಲದ ಏಷ್ಯನ್ ಗೇಮ್ ವಸತಿ ಸಂಕೀರ್ಣದಲ್ಲಿರುವ 6 ವಸತಿ ಗೃಹಗಳು ಗ್ರೂಪ್–ಎ ವೃಂದದ ಅಧಿಕಾರಿಗಳಿಗೆ ಮತ್ತು Prestige St. John's Woods Apartment, ತಾವರೆಕೆರೆ, ಬಿ.ಟಿ.ಎಂ. ಲೇಔಟ್‌ಯಲ್ಲಿರುವ 4 ವಸತಿ ಗೃಹಗಳು ಗ್ರೂಪ್ ಎ ವೃಂದದ ಅಧಿಕಾರಿಗಳಿಗೆ ಹಾಗೂ ಮಿಷನ್ ರಸ್ತೆಯಲ್ಲಿರುವ 20 ವಸತಿಗೃಹಗಳು ಗ್ರೂಪ್ ಎ ಮತ್ತು ಬಿ ವೃಂದದ ಅಧಿಕಾರಿಗಳಿಗೆ ಮೀಸಲಿರಿಸಲಾಗಿರುತ್ತದೆ. ಪಾಲಿಕೆಯ 6 ರೆಫರಲ್ ಆಸ್ಪತ್ರೆ ಹಾಗೂ 27 ಹೆರಿಗೆ ಆಸ್ಪತ್ರೆಯ ಆವರಣಗಳಲ್ಲಿ ವಸತಿಗೃಹಗಳಿದ್ದು, ಸದರಿ ವಸತಿಗಳನ್ನು ರೆಫರಲ್ ಆಸ್ಪತ್ರೆ ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳಿಗೆ ಮೀಸರಿಸಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಸತಿ ಸೌಕರ್ಯಗಳ ಕೊರತೆ ಇರುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಒಟ್ಟು 12 ವಸತಿ ಕಟ್ಟಡ / ಫ್ಲಾಟ್‌ಗಳಿವೆ. ಇವುಗಳಲ್ಲಿ 11 ಮನೆಗಳು ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿದ್ದು, 01 ಮನೆ ಖಾಲಿ ಇರುತ್ತದೆ. ವಿವರ ಕೆಳಕಂಡಂತಿವೆ.

| ಕ್ರಸಂ | ಬ್ಲಾಕ್‌ಗಳ ಹೆಸರು | ಒಟ್ಟು ವಸತಿ ಗೃಹಗಳ ಸಂಖ್ಯೆ | ಹಂಚಿಕೆಯಾಗಿರುವ ವಸತಿ ಗೃಹಗಳು | ಖಾಲಿ ಇರುವ ವಸತಿ ಗೃಹಗಳು |
|---|---|---|---|---|
| 1 | ಆರ್.ಎಂ.ವಿ. 2ನೇ ಹಂತದಲ್ಲಿರುವ ಡಾಲರ್ಸ್ ಕಾಲೋನಿ | 06 | 06 | – |
| 2 | ಬಿ.ಟಿ.ಎಂ. ಲೇಔಟ್ | 06 | 05 | 01 |

ಕರ್ನಾಟಕ ಗೃಹ ಮಂಡಳಿಯು ರಾಜ್ಯಾದ್ಯಂತ ಬೆಂಗಳೂರು ನಗರ ಒಳಗೊಂಡಂತೆ **IAS/IPS/IFS** ಮತ್ತು ರಾಜ್ಯ ಸೇವೆ ಹಿರಿಯ ಅಧಿಕಾರಿಗಳಿಗೆ ಪ್ರತ್ಯೇಕವಾಗಿ ಯಾವುದೇ ವಸತಿ ಗೃಹಗಳನ್ನು ನಿರ್ಮಿಸಿರುವುದಿಲ್ಲ.

ಸರ್ಕಾರದ ಪೊಲೀಸ್ ಇಲಾಖೆಯ ಪ್ರಧಾನ ಕಛೇರಿಗಳಿರುವ ಬೆಂಗಳೂರು ನಗರದಲ್ಲಿ ಐಪಿಎಸ್ ವೃಂದದ ಮತ್ತು ಹಿರಿಯ ಅಧಿಕಾರಿಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/276/ಪೊಸಇ/2007, ದಿನಾಂಕ:17.06.2011 ರಲ್ಲಿ ಹೊರಡಿಸಿರುವ ನಿಯಮಗಳು ಕರ್ನಾಟಕ ಸರ್ಕಾರಿ (ಸಹಾಯಕ ಪೊಲೀಸ್)

ಸೂಪರಿಂಟೆಂಡೆಂಟರ ದರ್ಜೆ ಮತ್ತು ಅದಕ್ಕಿಂತ ಮೇಲಿನ ಪೊಲೀಸ್ ಅಧಿಕಾರಿಗಳ ವಸತಿಗೃಹಗಳ ಹಂಚಿಕೆ) ನಿಯಮ-2011 ರಲ್ಲಿನ ನಿಯಮಗಳನುಸಾರ ವಸತಿ ಗೃಹಗಳ ಹಂಚಿಕೆಯನ್ನು ಅರ್ಜಿಯ ನೊಂದಣಿಯ ದಿನಾಂಕವನ್ನು ಜೇಷ್ಠತೆಯ ಆಧಾರದ ಮೇಲೆ ವಸತಿ ಗೃಹವನ್ನು ಹಂಚಿಕೆ ಮಾಡಲಾಗುತ್ತಿದೆ. ವಸತಿ ಗೃಹ ಪಡೆಯುವ ಪೊಲೀಸ್ ಅಧಿಕಾರಿಯು ತನ್ನ ಹೆಸರಿನಲ್ಲಾಗಲಿ ಅಥವಾ ತನ್ನ ಪತ್ನಿಯ ಅಥವಾ ಅವಲಂಬಿತ ಮಕ್ಕಳ ಹೆಸರಿನಲ್ಲಿ ಬೆಂಗಳೂರು ನಗರದಲ್ಲಿ ಹಾಗೂ ಬೆಂಗಳೂರು ನಗರದ ಯಾವುದೇ ಉಪ ನಗರಗಳಲ್ಲಿ ಸ್ವಂತ ಮನೆಯನ್ನು ಹೊಂದಿಲ್ಲವೆಂದು ಅಫಿಡವಿಟ್ (Affidavit) ಅನ್ನು ಪಡೆದ ನಂತರ ವಸತಿಗೃಹವನ್ನು ಹಂಚಿಕೆ ಮಾಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿನ ಪದನಾಮಾಂಕಿತ ವಸತಿ ಗೃಹದಲ್ಲಿ ವಾಸಿಸುತ್ತಿರುವ ಪೊಲೀಸ್ ಅಧಿಕಾರಿಗಳನ್ನು ಹೊರತುಪಡಿಸಿ, ಹಿರಿಯ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿರುವ ಯಾವುದೇ ಅಧಿಕಾರಿಗಳು ಸ್ವಂತ ಮನೆಯನ್ನು ಹೊಂದಿದ್ದು, ಅವುಗಳನ್ನು ಬಾಡಿಗೆಗೆ ನೀಡಿ ಸರ್ಕಾರ ನೀಡುವ ವಸತಿ ಗೃಹಗಳಲ್ಲಿ ವಾಸವಿರುವವರು ಯಾರು ಇರುವುದಿಲ್ಲ.

ಲೋಕೋಪಯೋಗಿ ಇಲಾಖೆಯಿಂದ / ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ವಸತಿ ಗೃಹ ಹಂಚಿಕೆ ಮಾಡುವ ಸಂದರ್ಭದಲ್ಲಿ ವಸತಿ ಗೃಹ ಹಂಚಿಕೆ ಕೋರಿ ಅರ್ಜಿ ಸಲ್ಲಿಸುವ ಅಧಿಕಾರಿಗಳು ಅರ್ಜಿಯೊಂದಿಗೆ **"ತನ್ನ ಹೆಸರಿನಲ್ಲಾಗಲಿ ಅಥವಾ ಕುಟುಂಬದ ಅವಲಂಬಿತ ಹೆಸರಿನಲ್ಲಾಗಲಿ, ಸದಸ್ಯರ ಹೆಸರಿನಲ್ಲಾಗಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಂತ ಮನೆ ಹೊಂದಿಲ್ಲವೆಂದು ಹಾಗೂ ಶ್ರೀಯುತರು ವಸತಿ ಗೃಹ ಹಂಚಿಕೆಗಾಗಿ ಸಲ್ಲಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿರುವ ಎಲ್ಲಾ ಮಾಹಿತಿಗಳು ಸರಿಯಾಗಿದೆ ಎಂದು ಸಲ್ಲಿಸುವ ಪ್ರಮಾಣ ಪತ್ರವನ್ನು"** ಆಧರಿಸಿ ಸರ್ಕಾರಿ ವಸತಿ ಗೃಹ ಹಂಚಿಕೆ ಮಾಡಲಾಗಿರುತ್ತದೆ. ಈ ಪೈಕಿ ಬೆಂಗಳೂರಿನಲ್ಲಿ ಸ್ವಂತ ಮನೆಗಳನ್ನು ಹೊಂದಿರುವ ಅಧಿಕಾರಿಗಳು ಸರ್ಕಾರಿ ವಸತಿ ಗೃಹದಲ್ಲಿ ವಾಸವಾಗಿರುವ ಬಗ್ಗೆ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

**ಸಂ: ಲೋಇ 63 ಪಿಪಿಎಂ 2022**

**(ಸಿ.ಸಿ. ಪಾಟೀಲ)**
ಲೋಕೋಪಯೋಗಿ ಸಚಿವರು